# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 95 (995) |
| ಉತ್ತರಿಸಬೇಕಾದ ದಿನಾಂಕ | 21.09.2021 |
| ಉತ್ತರಿಸಬೇಕಾದವರು | ನಗರಾಭಿವೃದ್ಧಿ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ | ಕುಂದಾಪುರ ಪುರಸಭಾ ವ್ಯಾಪ್ತಿಯ 8ನೇ ವಾರ್ಡಿನಲ್ಲಿ ಪುರಸಭೆಯ ಒಳಚರಂಡಿ ಯೋಜನೆಯ ತ್ಯಾಜ್ಯ ಶುದ್ದೀಕರಣ ಘಟಕದ ನಿರ್ಮಾಣ ಪ್ರದೇಶವು ಜನವಸತಿ ಪ್ರದೇಶಕ್ಕೆ ತೀರಾ ಹತ್ತಿರದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕುಂದಾಪುರ ಪುರಸಭಾ ವ್ಯಾಪ್ತಿಯ ೮ನೇ ವಾರ್ಡಿನಲ್ಲಿ ಯಾವುದೇ ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು ನಿರ್ಮಿಸಲು ಪ್ರಸ್ತಾವನೆ ಇರುವುದಿಲ್ಲ. ಆದರೆ ೮ನೇ ವಾರ್ಡಿನ ಎ.ಪಿ.ಎಂ.ಸಿ ಎದುರಿನ ಶಿವರಾಮ ಕಾರಂತ ರಸ್ತೆಯ ಅಂತ್ಯ ಭಾಗದಲ್ಲಿ ಯೋಜನೆಯ ವಲಯ-ಔರ ನಕ್ಷೆಗನುಗುಣವಾಗಿ ಹಾಗೂ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರ ಪ್ರಸ್ತಾವನೆಯಂತೆ ತಗ್ಗಿನ ಪ್ರದೇಶದಲ್ಲಿ ಸಂಗ್ರಹವಾಗುವ ತ್ಯಾಜ್ಯ ನೀರನ್ನು ಪಂಪು ಮಾಡಲು ಅನುಕೂಲವಾಗುವಂತೆ ತೇವಬಾವಿ ನಿರ್ಮಿಸಲು (ವೆಟ್‌ವೆಲ್) ಖಾಸಗಿ ಸ್ಥಳವನ್ನು ಗುರುತಿಸಿ ಮಂಡಳಿಯವರಿಗೆ ಹಸ್ತಾಂತರಿಸಲಾಗಿರುತ್ತದೆ ಎಂದು ಪೌರಾಡಳಿತ ನಿರ್ದೇಶಕರು ತಿಳಿಸಿರುತ್ತಾರೆ.<br><br>ಕುಂದಾಪುರ ಪುರಸಭಾ ವ್ಯಾಪ್ತಿಯ 8ನೇ ವಾರ್ಡ್‌ನಲ್ಲಿ ಯಾವುದೇ ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು ನಿರ್ಮಿಸಲು ಪ್ರಸ್ತಾವನೆ ಇರುವುದಿಲ್ಲ. ಆದರೆ 1 ತೇವ ಬಾವಿ ನಿರ್ಮಿಸಲು ಸಿ.ಆರ್.ಝಡ್ ವತಿಯಿಂದ ಅನುಮತಿಯನ್ನು ಪಡೆಯಲಾಗಿದೆ ಎಂದು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ರವರು ತಿಳಿಸಿರುತ್ತಾರೆ. |
| ಆ | ಇದರ ನಿರ್ಮಾಣಕ್ಕೆ ಸಾರ್ವಜನಿಕರ ಆಕ್ಷೇಪವಿರುವುದು ನಿಜವೇ; ಪ್ರಸ್ತಾವಿತ ಸ್ಥಳವು ಸಿ.ಆರ್.ಜೆಡ್ ವ್ಯಾಪ್ತಿಗೆ ಬರುವುದೇ; ಬಂದಲ್ಲಿ, ಸಿ.ಆರ್.ಜೆಡ್ ನಿಂದ ಅನುಮತಿ ಪಡೆಯಲಾಗಿದೆಯೇ; (ಸಿ.ಆರ್.ಜೆಡ್ ಅನುಮತಿ ಪತ್ರದ ಪ್ರತಿ ನೀಡುವುದು) | 1) ಸದರಿ ಸ್ಥಳದಲ್ಲಿ ಒಳಚರಂಡಿ ಯೋಜನೆಯ ವೆಟ್‌ವೆಲ್ ನಿರ್ಮಾಣದ ಬಗ್ಗೆ ಸಾರ್ವಜನಿಕ ಆಕ್ಷೇಪಣೆ ಇದ್ದು, ಸದರಿ ಆಕ್ಷೇಪಣೆಯನ್ನು ದಿ:07-04-2021ರ ಸಾಮಾನ್ಯ ಸಭೆಯಲ್ಲಿ ಮಂಡಿಸಲಾಗಿದ್ದು, ಸದರಿ ಸಭೆಯಲ್ಲಿ ಯೋಜನೆಯ ಪ್ರಗತಿಗಾಗಿ ಸದರಿ ಜಮೀನನ್ನು ಖರೀದಿಸುವುದು ಅತೀ ಅಗತ್ಯವಾಗಿರುವುದರಿಂದ, ಸದರಿ ಜಮೀನಿನ ಖರೀದಿ ಪ್ರಕ್ರಿಯೆಯನ್ನು ಆದ್ಯತೆ ಮೇರೆಗೆ ಕೈಗೊಳ್ಳಲು, ಸದರಿ ಭೂಮಿಯ ಖರೀದಿಯಿಂದ ಒಳಚರಂಡಿ ಯೋಜನೆಯ ವೆಟ್‌ವೆಲ್‌ಗಳ ಜಾಗದ ಸಮಸ್ಯೆ ಬಗೆಹರಿಯುವುದರಿಂದ ಖರೀದಿಸಲು ನಿರ್ಣಯಿಸಿ, ಇದರಂತೆ ಆಕ್ಷೇಪಣೆದಾರರಿಗೆ ಹಿಂಬರಹ ನೀಡಲಾಗಿದೆ ಎಂದು ಮುಖ್ಯಾಧಿಕಾರಿಗಳು, ಪುರಸಭೆ ಕುಂದಾಪುರರವರು ವರದಿ ಮಾಡಿರುತ್ತಾರೆ.<br>2) ಸದರಿ ಸ್ಥಳದಲ್ಲಿ ತೇವಬಾವಿ (ವೆಟ್‌ವೆಲ್) ನಿರ್ಮಿಸಲು ಕರ್ನಾಟಕ ರಾಜ್ಯ ಕರಾವಳಿ ನಿಯಂತ್ರಣ ವಲಯದ (CRZ) ನಿರಾಕ್ಷೇಪಣಾ ಪತ್ರವನ್ನು ವಿಶೇಷ ನಿರ್ದೇಶಕರು, (ತಾಂತ್ರಿಕ ಕೋಶ), ಅರಣ್ಯ ಮತ್ತು ಜೀವಿ ಪರಿಸ್ಥಿತಿ ಇಲಾಖೆರವರಿಂದ ಪತ್ರದ ಸಂಖ್ಯೆ:ಅಪಜಿ 321 ಸಿಆರ್‌ಜೆಡ್ 2018, ದಿನಾಂಕ 26-05-2020ರಲ್ಲಿ ಪಡೆಯಲಾಗಿರುತ್ತದೆ. |

| | | |
|---|---|---|
| ಇ | ಸದರಿ ಸ್ಥಳವು ಖಾಸಗಿಯವರಿಂದ ಖರೀದಿಸುತ್ತಿರುವುದು ನಿಜವೇ; ಹೌದಾದಲ್ಲಿ, ಯಾವ ದರದಲ್ಲಿ ಖರೀದಿಸಲಾಗುವುದು; ಶಾಸನ ಬದ್ಧವಾಗಿ ಅಳತೆ ಮಾಡಲಾಗಿದೆಯೇ; ಮಾಡಿದ್ದಲ್ಲಿ, ಜಾಗದ ನಕ್ಷೆಯ ಪ್ರತಿ ಒದಗಿಸುವುದು; | ಸದರಿ ವೆಟ್‌ವೆಲ್-5ರ ರಚನೆಗೆ ಗುರುತಿಸಿರುವ ಕುಂದಾಪುರ ಕಸಬಾ ಗ್ರಾಮದ ಸರ್ವೆ ನಂ. 33/21 ರಲ್ಲಿ 0.05.00 ಎಕರೆ, ಸರ್ವೆ ನಂ. 33/22 ರಲ್ಲಿ 0.12.00 ಎಕರೆ ಹಾಗೂ ಸರ್ವೆ ನಂ. 33/3 ರಲ್ಲಿ 0.14.00 ಎಕರೆ ಒಟ್ಟು 0.31.00 ಎಕರೆ ಜಮೀನನ್ನು ಗುರುತಿಸಿದ್ದು, ಸದರಿ ಜಮೀನು ಶ್ರೀಮತಿ ಕಲ್ಪನಾ ನಾಗರಾಜ್ ಇವರ ಖಾಸಗಿ ಜಮೀನು ಆಗಿರುತ್ತದೆ. ಸದರಿ ಜಮೀನನ್ನು ಸದರಿಯವರಿಂದ ಭೂಸ್ವಾಧೀನ ಕಾಯ್ದೆ-2013 ರಂತೆ ಒಪ್ಪಿಗೆ ಪತ್ರವನ್ನು ಪಡೆದು ಮಾನ್ಯ ಭೂಸ್ವಾಧೀನಾಧಿಕಾರಿಯವರಿಗೆ ಪ್ರಸ್ತಾವನೆ ಸಲ್ಲಿಸಿದ್ದು, ಅದರಂತೆ ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 02-02-2021ರಂದು ನಡೆದ ಸಭೆಯ ನಿರ್ಣಯದಂತೆ ಸೆಂಟ್ 1ಕ್ಕೆ ರೂ.3,65,626/-ರಂತೆ ಒಟ್ಟು ಮೊತ್ತ ರೂ.95,06,276.00ಕ್ಕೆ ಜಿಲ್ಲಾ ಮಟ್ಟದ ದರ ನಿರ್ಧರಣಾ ಸಲಹಾ ಸಮಿತಿಯು ಸದರಿ ಜಮೀನುಗಳಿಗೆ ದರ ನಿರ್ಧರಿಸಲಾಗಿರುತ್ತದೆ.<br><br>ಜಿಲ್ಲಾ ಮಟ್ಟದ ದರ ನಿರ್ಧರಣಾ ಸಲಹಾ ಸಮಿತಿಯ ನಿರ್ಣಯದಂತೆ ಕೃಷಿ ಜಮೀನುಗಳಾದ ಸರ್ವೆ ನಂ. 33/22 ರಲ್ಲಿ 0.12.00 ಎಕರೆ ಮತ್ತು ಸರ್ವೆ ನಂ. 33/3ರಲ್ಲಿ 0.14.00 ಎಕರೆ ಜಮೀನುಗಳಿಗೆ ರೂ.95,06,276.00 ನ್ನು ನಿಗಧಿಪಡಿಸಿದ್ದು, ಸದರಿ ಜಮೀನುಗಳನ್ನು ಸದರಿ ದರಕ್ಕೆ ದಿ: 04-05-2021 ರಂತೆ ಕರ್ನಾಟಕ ರಾಜ್ಯ ಗೌರವಾನ್ವಿತ ರಾಜ್ಯಪಾಲರ ಪರವಾಗಿ ಪುರಸಭೆಗೆ ಕ್ರಯ ಸಾಧನ ಮಾಡಿಕೊಳ್ಳಲಾಗಿರುತ್ತದೆ. ಹಾಗೂ ಸರ್ವೆ ನಂ. 33/21 0.05.00 ಎಕರೆ ಕೃಷಿಯೇತರ ಜಮೀನು ಖರೀದಿಯು ಪ್ರಕ್ರಿಯೆಯಲ್ಲಿರುತ್ತದೆ.<br><br>ಸದರಿ ಈ ಮೇಲಿನ ನಿವೇಶನಗಳ ನಕ್ಷೆಯನ್ನು ತಾಲೂಕು ಸರ್ವೆಯರ್‌ರಿಂದ ತಯಾರಿಸಿದ್ದು, ಸದರಿ ನಕ್ಷೆಯನ್ನು ಲಗತ್ತಿಸಿದೆ. ಖರೀದಿ ಮಾಡಲಾದ ಜಮೀನನ್ನು ಒಳಚರಂಡಿ ಮಂಡಳಿಗೆ ಹಸ್ತಾಂತರಿಸಲಾಗಿದೆ ಎಂದು ಮುಖ್ಯಾಧಿಕಾರಿಗಳು, ಪುರಸಭೆ ಕುಂದಾಪುರರವರು ವರದಿ ಮಾಡಿರುತ್ತಾರೆ |
| ಈ | ಪ್ರಸ್ತಾವಿತ ಸ್ಥಳಕ್ಕೆ ದಾರಿಯಿದೆಯೇ; ಇದ್ದಲ್ಲಿ ದಾರಿಯ ನಕ್ಷೆ ಒದಗಿಸುವುದು; ಇಲ್ಲವಾದ್ದಲ್ಲಿ, ದಾರಿಯಿಲ್ಲದೇ ಇದ್ದರೂ ಘಟಕವನ್ನು ನಿರ್ಮಿಸುವ ಉದ್ದೇಶವೇನು? | ಸದರಿ ನಿವೇಶನಕ್ಕೆ ಸಂಪರ್ಕ ರಸ್ತೆ ಇದ್ದು, ಭೂಪರಿವರ್ತಿತ ಜಮೀನಿನ ನಕ್ಷೆಯಲ್ಲಿ ಕಾಣಿಸಿರುವಂತೆ ಸ್ಥಳದಲ್ಲಿ ಮಾಮೂಲು ರಸ್ತೆ ಇರುತ್ತದೆ ಹಾಗೂ ಸದರಿ ರಸ್ತೆಗೆ 2010ನೇ ಸಾಲಿನಲ್ಲಿ ಪುರಸಭೆಯಿಂದ ಶಿವರಾಮ ಕಾರಂತ ರಸ್ತೆ ಎಂದು ನಾಮಕರಣ ಮಾಡಿದೆ ಎಂದು ಮುಖ್ಯಾಧಿಕಾರಿಗಳು, ಪುರಸಭೆ ಕುಂದಾಪುರರವರು ವರದಿ ಮಾಡಿರುತ್ತಾರೆ. |

ಸಂಖ್ಯೆ : ನಅಇ 157 ಯುಎಂಎಸ್ 2021

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು